August 17, 2026

The General Manager
Dept. of Corporate Services
Bombay Stock Exchange Limited
Floor 25th P.J. Towers
Dalal Street
Mumbai - 400 001.

The Listing Department
National Stock Exchange of India Ltd.
Exchange Plaza, Plot no. C/1, G Block,
Bandra-Kurla Complex Bandra (E)
Mumbai - 400 051

Dear Sir,

Sub: Copy of Public Notice of Unaudited Financial Results for the quarter ended June 30, 2026 advertised in Newspapers

Ref: BSE Scrip Code: 543231

NSE: Stock Code: ADL

Please find enclosed herewith a copy of public notice advertised in the newspapers with regard to Unaudited Financial Results for the quarter ended June 30, 2026.

Please find attached copy of newspaper advertisement.

This is for your information and record.

Thanking you.
Yours faithfully,
For **Archidply Decor Limited**

Shyam Daga

Digitally signed by Shyam Daga
DN: c=IN, o=Personal, postalCode=560046, l=Bangalore, st=Karnataka, street=Flat no 315,Mangalya Residency Benson Town, Bangalore North, Bangalore North Karnataka India- 560046-, title=3327, 2.5.4.20=9885d0d5dc361094aade90b71e8b9251e6fa32b6391a3ecbd94d4d7b7974da02, serialNumber=b266028a42d0033530926aa468ee375b0d7f43ca586146d656983929d97015a8, email=shyamdaga1302@gmail.com, cn=Shyam Daga
Date: 2026.08.17 15:25:42 +05'30'

(Shyam Daga)
Managing Director
DIN: 00561803
Encl:a/a

ಆಹ್ವಾನ

ಚೇಳೂರು ತಾಲೂಕಿನ ಪುಲ್ಲಗಲ್ಲು ಗ್ರಾಪಂ ವ್ಯಾಪ್ತಿಯಲ್ಲಿ ಎಸ್‌ಎನ್‌ಎಸ್ ಟ್ರಸ್ಟ್ ಆಯೋಜಕರಿಂದ ನೀಡಿರುವ ಉಚಿತ ಸಾಮೂಹಿಕ ವಿವಾಹಕ್ಕೆ ಸಾರ್ವಜನಿಕರಿಗೆ ಅರಿಶಿಣ-ಕುಂಕುಮ ಕಿಟ್‌ನೊಂದಿಗೆ ಆಹ್ವಾನ ಪತ್ರಿಕೆ ನೀಡಿ ಆಹ್ವಾನ ಕೋರಲಾಯಿತು. ಮುಖಂಡರಾದ ಶೇಖರರೆಡ್ಡಿ ಬಾಬು, ವೆಂಕಟರವಣ, ನಾರಾಯಣಪ್ಪ, ವೆಂಕಟೇಶ್ ಇತರರು ಇದ್ದರು.

ಸುದ್ದಿ ಕಾರ್ನರ್

ಸಾಮೂಹಿಕ ವಿವಾಹಕ್ಕೆ ಆಹ್ವಾನ

ಚೇಳೂರು: ಎಸ್.ಎನ್. ಸುಬ್ಬಾರೆಡ್ಡಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಬಾಗೇಪಲ್ಲಿ ತಾಲೂಕಿನ ದೇವರಗುಡಿಪಲ್ಲಿ (ಗಡಿದಂ) ಲಕ್ಷ್ಮಿ ವೆಂಕಟರಮಣ ದೇವಾಲಯದಲ್ಲಿ ಆ.6ರಂದು ಹಮ್ಮಿಕೊಂಡಿದ್ದು, ಕಾರ್ಯಕ್ರಮಕ್ಕೆ ಆಹ್ವಾನಿಸಲು ಪ್ರತಿ ಮನೆ ಮನೆಗೂ ತೆರಳಿ ಮಹಿಳೆಯರಿಗೆ ಅರಿಶಿಣ-ಕುಂಕುಮದ ಜತೆಗೆ ಆಹ್ವಾನ ಪತ್ರಿಕೆ ನೀಡಲಾಗುತ್ತಿದೆ ಎಂದು ರಾಮಾಪುರದ ಗ್ರಾಮದ ಕಾಂಗ್ರೆಸ್ ಮುಖಂಡ ಸುಧಾಕರ್ ಹೇಳಿದರು. ತಾಲೂಕಿನ ಪುಲ್ಲಗಲ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗುರುವಾರ ಎಸ್‌ಎನ್‌ಎಸ್ ಟ್ರಸ್ಟ್ ಆಯೋಜಕರಿಂದ ನೀಡಿರುವ ಅರಿಶಿಣ-ಕುಂಕುಮ ಕಿಟ್‌ಗಳನ್ನು ಮನೆ ಮನೆಗೂ ವಿತರಿಸಿ ಮಾತನಾಡಿ, ದುಂದು ವೆಚ್ಚದ ವಿವಾಹಗಳ ಬದಲಾಗಿ ಸಾಮೂಹಿಕ ವಿವಾಹ ಉತ್ತಮ ಕಾರ್ಯವಾಗಿದೆ. ಬಡ ಜನರು ಅದ್ದೂರಿ ವಿವಾಹ ನಡೆಸಲು ಅಸಾಧ್ಯವಾದ ಕಾರಣ ಸಾಮೂಹಿಕ ವಿವಾಹದ ಮೂಲಕ ವಿಜೃಂಭಣೆಯಲ್ಲಿ ವಿವಾಹ ಕಾರ್ಯಕ್ರಮ ನಡೆಸಲಾಗುತ್ತಿದೆ. ಎಸ್.ಎನ್. ಸುಬ್ಬಾರೆಡ್ಡಿ ಅವರು ಟ್ರಸ್ಟ್ ವತಿಯಿಂದ ಬಡವರ ಅನುಕೂಲಕ್ಕಾಗಿ 23 ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಆಯೋಜಿಸಿದ್ದು, ಕಾರ್ಯಕ್ರಮದಲ್ಲಿ ಭಾಗಿಯಾಗಿ ನವ ದಂಪತಿಗಳಿಗೆ ಶುಭಕೋರಬೇಕು ಎಂದು ಮನವಿ ಮಾಡಿದರು.

ಕಾರ್ಗಿಲ್ ವಿಜಯೋತ್ಸವ ಅನುಭವ ಹಂಚಿಕೆ

ಚಿಂತಾಮಣಿ: ರಾಷ್ಟ್ರ ಪ್ರಶಸ್ತಿ ಪುರಸ್ಕೃತ ದಿ. ವೈ.ಎನ್.ಗುಂಡಪ್ಪ ಸ್ಥಾಪನೆ ಮಾಡಿರುವ ಶನಿವಾರದ ವಾರದ ಕಾರ್ಯಕ್ರಮದ ಸಾಹಿತ್ಯಕೂಟದಲ್ಲಿ ಆ.15 ರಂದು ಸಂಜೆ 4-30 ರಿಂದ 5-30ರವರೆಗೆ ನಗರದ ಎನ್.ಆರ್.ಬಡಾವಣೆಯ ಹರಿಕೀರ್ತನ ಮಂದಿರದಲ್ಲಿ ಭಕ್ತಿಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಭಾರತೀಯ ವಾಯುಪಡೆ ಕಾರ್ಪೋರಲ್ ಕೆ.ವಿ. ರಾಘವೇಂದ್ರನ್ ಅವರು ಕಾರ್ಗಿಲ್ ವಿಜಯೋತ್ಸವದಲ್ಲಿ 'ನನ್ನ ಕಾರ್ಗಿಲ್ ಯುದ್ಧದಲ್ಲಿನ ಅನುಭವಗಳು' ಕುರಿತು ಉಪನ್ಯಾಸ ನೀಡುವರು. ಪ್ರಾಧ್ಯಾಪಕ ಎಸ್.ಅಶ್ವತ್ಥ್ ಇತರರು ಪಾಲ್ಗೊಳ್ಳುವರು ಎಂದು ಚಿಂತಾಮಣಿ ಸಾಹಿತ್ಯಕೂಟ ಪ್ರಕಟಣೆಯಲ್ಲಿ ತಿಳಿಸಿದೆ.

ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಕಲ್ಪಿಸಲಿ

ಗುಡಿಬಂಡೆ: ಸೂಕ್ತ ಬಸ್ ವ್ಯವಸ್ಥೆ ಇಲ್ಲದೆ ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ತರಗತಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಬಸ್ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸಿ ವಿದ್ಯಾರ್ಥಿಗಳು ಹಾಗೂ ಪಾಲಕರು ತಾಲೂಕಿನ ಹಂಪಸಂದ್ರದಲ್ಲಿ ಸರ್ಕಾರಿ ಬಸ್ ತಡೆದು ಪ್ರತಿಭಟನೆ ನಡೆಸಿದರು. ಪಾಲಕ ಈಶ್ವರ್ ಮಾತನಾಡಿ, ಹಂಪಸಂದ್ರದಿಂದ ಹಲವು ವಿದ್ಯಾರ್ಥಿಗಳು ಬಾಗೇಪಲ್ಲಿ ಶಾಲಾ- ಕಾಲೇಜುಗಳಿಗೆ ಹೋಗುತ್ತಾರೆ. ಆದರೆ, ಸಮಯಕ್ಕೆ ಸರಿಯಾಗಿ ಸಾರಿಗೆ ವ್ಯವಸ್ಥೆ ಇಲ್ಲದೆ ಇರುವುದರಿಂದ ನಿಗದಿತ ಅವಧಿಗೆ ತರಗತಿಗೆ ಹೋಗಲು ಆಗುತ್ತಿಲ್ಲ. ಕೂಡಲೇ ಸಂಬಂಧಿಸಿದ ಅಧಿಕಾರಿಗಳು ನಮ್ಮ ಮನವಿಗೆ ಸ್ಪಂದಿಸಬೇಕೆಂದು ಮನವಿ ಮಾಡಿದರು. ಪಾಲಕ ಆದಿನಾರಾಯಣಪ್ಪ ಮಾತನಾಡಿ, ಬೆಳಗ್ಗೆ ಗುಡಿಬಂಡೆ ಕಡೆಯಿಂದ ಬರುವಾಗ ಬಸ್‌ಗಳಲ್ಲಿ ಜನ ತುಂಬಿರುತ್ತಾರೆ. ಮಕ್ಕಳಿಗೆ ಪ್ರಯಾಣಿಸಲು ಜಾಗವೇ ಇರುವುದಿಲ್ಲ. ಇದರಿಂದ ಆಟೋಗಳನ್ನು ಅವಲಂಬಿಸಬೇಕಾಗಿದೆ ಎಂದರು. ಸ್ಥಳಕ್ಕಾಗಮಿಸಿದ ಗುಡಿಬಂಡೆ ಪೊಲೀಸ್ ಠಾಣೆ ಆರಕ್ಷಕ ಉಪನಿರೀಕ್ಷಕ ಮತ್ತುರಾಜು ಪ್ರತಿಭಟನಾನಿರತರಿಗೆ ನಿರತರಾದ ವಿದ್ಯಾರ್ಥಿಗಳು ಹಾಗೂ ಪಾಲಕರನ್ನು ಬಲವಂತವಾಗಿ ಸ್ಥಳದಿಂದ ಕಳುಹಿಸಿದರು.

ಗುಡಿಬಂಡೆ ತಾಲೂಕು ಹಂಪಸಂದ್ರ ಗ್ರಾಮದಲ್ಲಿ ಸೂಕ್ತ ಬಸ್ ವ್ಯವಸ್ಥೆ ಕಲ್ಪಿಸುವಂತೆ ವಿದ್ಯಾರ್ಥಿಗಳು ಹಾಗೂ ಪಾಲಕರು ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಿದರು. ಪಾಲಕರಾದ ಈಶ್ವರ್, ಆದಿನಾರಾಯಣಪ್ಪ ಇತರರಿದ್ದರು.

ಶೂ, ಸಾಕ್ಸ್ ವಿತರಣಾ ಸಮಾರಂಭದಲ್ಲಿ ಚಿಕ್ಕಬಳ್ಳಾಪುರ ಡಯಟ್‌ನ ಹಿರಿಯ ಉಪನ್ಯಾಸಕಿ ವಾಣಿ ಸಲಹೆ

ವಿದ್ಯಾರ್ಥಿ ಕೇಂದ್ರೀಕೃತ ಕಲಿಕಾ ವಿಧಾನಕ್ಕಿರಲಿ ಆದ್ಯತೆ

■ ವಿಜಯವಾಣಿ ಸುದ್ದಿಜಾಲ ಶಿಡ್ಲಘಟ್ಟ

ತುಮ್ಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಚಿಕ್ಕಬಳ್ಳಾಪುರ ಡಯಟ್‌ನ ಹಿರಿಯ ಉಪನ್ಯಾಸಕಿ ವಾಣಿ ಗುರುವಾರ ಭೇಟಿ ನೀಡಿ, ಶೈಕ್ಷಣಿಕ ಚಟುವಟಿಕೆಗಳನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ವಿವಿಧ ತರಗತಿಗಳಲ್ಲಿ ಶಿಕ್ಷಕರು ನಡೆಸಿದ ಪಾಠ ಬೋಧನೆಯನ್ನು ವೀಕ್ಷಿಸಿ, ಬೋಧನಾ ವಿಧಾನಗಳ ಕುರಿತು ಶಿಕ್ಷಕರಿಗೆ ಮಾರ್ಗದರ್ಶನ ನೀಡಿದರು.

ವಿದ್ಯಾರ್ಥಿಗಳ ಕಲಿಕಾ ಪ್ರಗತಿ, ತರಗತಿ ಚಟುವಟಿಕೆಗಳಲ್ಲಿ ಅವರ ಭಾಗವಹಿಸುವಿಕೆ ಹಾಗೂ ಕಲಿಕೆಯಲ್ಲಿನ ಆಸಕ್ತಿಯನ್ನು ವಾಣಿ ಗಮನಿಸಿದರು.ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಪಠ್ಯ ವಿಷಯಗಳ ಕುರಿತು ಪ್ರಶ್ನೆಗಳನ್ನು ಕೇಳುವ ಮೂಲಕ ಅವರ ಅರಿವು ಮತ್ತು ಚಿಂತನಾ ಸಾಮರ್ಥ್ಯವನ್ನು ಪರಿಶೀಲಿಸಿದರು.

ಶಿಡ್ಲಘಟ್ಟ ತಾಲೂಕಿನ ತುಮ್ಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ಶೂ ಹಾಗೂ ಸಾಕ್ಸ್‌ಗಳನ್ನು ವಿತರಿಸಲಾಯಿತು.ವಾಣಿ, ಶಾಲೆ ಮುಖ್ಯಶಿಕ್ಷಕಿ ಎಂ.ಉಮಾದೇವಿ, ಎಸ್‌ಡಿಎಂಸಿ ಅಧ್ಯಕ್ಷ ಅಶ್ವತ್ಥನಾರಾಯಣ್ ಹಾಗೂ ಶಿಕ್ಷಕರಾದ ಆನಂದ್ ಕುಮಾರ್, ಮಂಜುನಾಥ್, ನಾಗರತ್ನ ಇದ್ದರು.

ಹಿರಿಯ ಉಪನ್ಯಾಸಕಿ ವಾಣಿ ಮಾತನಾಡಿ, ವಿದ್ಯಾರ್ಥಿಗಳ ಕಲಿಕೆಯಲ್ಲಿ ಗುಣಮಟ್ಟ ಹೆಚ್ಚಿಸಲು ಶಿಕ್ಷಕರು ಪಾಠ ಬೋಧನೆಯ ಜತೆಗೆ ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕಾಮಟ್ಟವನ್ನು ಗಮನಿಸಬೇಕು. ಮಕ್ಕಳಲ್ಲಿ ಪ್ರಶ್ನಿಸುವ, ಚಿಂತಿಸುವ ಮತ್ತು ಸ್ವತಂತ್ರವಾಗಿ ಕಲಿಯುವ ಮನೋಭಾವ ಬೆಳೆಸಬೇಕು. ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ಚಟುವಟಿಕೆ ಆಧಾರಿತ ಬೋಧನೆಯ ಮೂಲಕ ಆಸಕ್ತಿ ಮೂಡಿಸಬೇಕು. ಶಿಕ್ಷಕರ ನಿರಂತರ ಮಾರ್ಗದರ್ಶನ ಮತ್ತು ಪ್ರೋತ್ಸಾಹವೇ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪ್ರಮುಖವಾಗುತ್ತದೆ. ಶಾಲೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯನ್ನು ಮತ್ತಷ್ಟು ಪರಿಣಾಮಕಾರಿಗೊಳಿಸಲು ಸರಳ ಬೋಧನಾ ಸಾಮಗ್ರಿಗಳ ಬಳಕೆ, ಗುಂಪು ಚಟುವಟಿಕೆಗಳು, ಪ್ರಶ್ನೋತ್ತರ, ಚರ್ಚೆ, ವಿದ್ಯಾರ್ಥಿ ಕೇಂದ್ರಿತ ಕಲಿಕಾ ವಿಧಾನಗಳಿಗೆ ಆದ್ಯತೆ ನೀಡುವಂತೆ ಶಿಕ್ಷಕರಿಗೆ ಸಲಹೆ ನೀಡಿದರು. ಪ್ರತಿಯೊಬ್ಬ ಮಗುವಿನ ಸಾಮರ್ಥ್ಯ ಹಾಗೂ ಕಲಿಕೆಯ ವೇಗವನ್ನು ಗುರುತಿಸಿ, ಅಗತ್ಯವಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಮಾರ್ಗದರ್ಶನ ನೀಡಬೇಕು ಎಂದರು. ವಿದ್ಯಾರ್ಥಿಗಳಿಗೆ ಶೂ ಹಾಗೂ ಸಾಕ್ಸ್‌ಗಳನ್ನು ವಿತರಿಸಲಾಯಿತು.

ಚಿಂತಾಮಣಿಯ ಕೈಲಾಸಗಿರಿ ಬೆಟ್ಟದಲ್ಲಿನ ಚತುರ್ಮುಖಲಿಂಗೇಶ್ವರನಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

ಟೊಮ್ಯಾಟೊ ಮಾರುಕಟ್ಟೆ ನಿರ್ಮಿಸಿ

ಎಪಿಎಂಸಿ ವರ್ತಕರು, ಹಮಾಲಿ, ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನೆ

■ ವಿಜಯವಾಣಿ ಸುದ್ದಿಜಾಲ ಬಾಗೇಪಲ್ಲಿ

ಎಪಿಎಂಸಿ ಭೂಮಿಯನ್ನು ಇತರ ಇಲಾಖೆಗಳಿಗೆ ಮಂಜೂರು ಮಾಡದೆ ಟೊಮ್ಯಾಟೊ ಮಾರುಕಟ್ಟೆ ನಿರ್ಮಿಸಿಕೊಡಬೇಕು ಎಂದು ಒತ್ತಾಯಿಸಿ ತಾಲೂಕು ವರ್ತಕರ ಸಂಘದ ಮುಖಂಡರು, ಸದಸ್ಯರು ಪಟ್ಟಣದ ತಹಸೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವರ್ತಕರ ಸಂಘ, ಹಮಾಲಿ ಸಂಘ ಹಾಗೂ ರೈತ ಸಂಘದ ನೇತೃತ್ವದಲ್ಲಿ ಟೊಮ್ಯಾಟೊ ಮಾರುಕಟ್ಟೆಗೆ ಮೀಸಲಿಟ್ಟಿರುವ ಸರ್ವೆ ನಂ 402 ರ ಸರ್ಕಾರಿ ಭೂಮಿಯನ್ನು ಇತರ ಇಲಾಖೆಗಳಿಗೆ ಮಂಜೂರು ಮಾಡುವ ಮಾತುಗಳು ಕೇಳಿಬಂದಿದ್ದು, ಯಾವುದೇ ಕಾರಣಕ್ಕೂ ಬೇರೆ ಇಲಾಖೆಗಳಿಗೆ ಮಂಜೂರು ಮಾಡಬಾರದು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ತಾಲೂಕು ವರ್ತಕರ ಸಂಘದ ಅಧ್ಯಕ್ಷ ಎಚ್.ಎಸ್.ನರೇಂದ್ರ ಮಾತನಾಡಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಮೀಸಲಿಟ್ಟಿರುವ 50 ಎಕರೆ ಪ್ರದೇಶದಲ್ಲಿ ಇತರ ಇಲಾಖೆಗಳಿಗೆ ಭೂಮಿ ಮಂಜೂರು ಮಾಡಿದರೆ ತಹಸೀಲ್ದಾರ್ ಕಚೇರಿ ಆವರಣದಲ್ಲಿ ತರಕಾರಿ ಮಾರಾಟ ಮಾಡಿ ಹೋರಾಟ ನಡೆಸಬೇಕಾಗುತ್ತದೆ ಎಂದು ತಾಲೂಕು ಆಡಳಿತಕ್ಕೆ ಎಚ್ಚರಿಕೆ ನೀಡಿದರು. ಬಾಗೇಪಲ್ಲಿ ಪಟ್ಟಣದ ಟಿ.ಬಿ.ಕ್ರಾಸ್‌ನಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆಗೆ ಆಂಧ್ರಪ್ರದೇಶ, ಗುಡಿಬಂಡೆ, ನೆರೆಹೊರೆಯ ಹತ್ತಾರು ತಾಲೂಕುಗಳಿಂದ ರೈತರು ಬರುತ್ತಿದ್ದು, ತರಕಾರಿ ವ್ಯಾಪಾರ ವಹಿವಾಟಿನಲ್ಲಿ ಜಿಲ್ಲೆಗೆ ಎರಡನೇ ಸ್ಥಾನದಲ್ಲಿದೆ. ಈ ಭಾಗದ ರೈತರು ಟೊಮ್ಯಾಟೊ ಬೆಳೆಯನ್ನೇ ಹೆಚ್ಚಾಗಿ ಬೆಳೆಯುತ್ತಿರುವುದರಿಂದ ಅತಿ ಹೆಚ್ಚು ವಹಿವಾಟು ನಡೆಯುತ್ತಿದೆ. ಹಾಗಾಗಿ ಖಾಸಗಿ ಪ್ರದೇಶದಲ್ಲಿ ಬಾಡಿಗೆ ಪಾವತಿಸಿ ಟೊಮ್ಯಾಟೊ ಮಂಡಿಗಳನ್ನು ಅತಿ ಕಷ್ಟದಿಂದ ನಿರ್ವಹಿಸಲಾಗುತ್ತಿದೆ. ಇದರಿಂದ ರೈತರು, ಹಮಾಲಿಗಳು, ವ್ಯಾಪಾರಸ್ಥರಿಗೆ, ವಾಹನ ನಿಲುಗಡೆಗೆ ಅನಾನುಕೂಲ ಆಗುತ್ತಿದೆ ಎಂದರು.

ತಾಲೂಕಿನ ಕಸಬಾ ಹೋಬಳಿಯ ಸರ್ವೆ ನಂ 406ರಲ್ಲಿರುವ 50 ಎಕರೆ ಹಾಗೂ ಕೊಂಡಿರೆಡ್ಡಿಪಲ್ಲಿ ಗ್ರಾಮದ ಸರ್ವೆ ನಂ46ರಲ್ಲಿರುವ ಸರ್ಕಾರಿ ಭೂಮಿಯಲ್ಲಿ ಎಲ್ಲ ರೀತಿಯ ಸೌಲಭ್ಯಗಳನ್ನೊಳಗೊಂಡಂತೆ ಟೊಮ್ಯಾಟೊ ಮಾರುಕಟ್ಟೆ ನಿರ್ಮಿಸಿಕೊಡುವಂತೆ 2024 ಮತ್ತು 2025 ನೇ ಸಾಲಿನಲ್ಲಿ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಹಾಗೂ ಅಂದಿನ ತಹಸೀಲ್ದಾರ್ ಪ್ರಶಾಂತ್ ಕೆ. ಪಾಟೀಲ್ ಅವರಿಗೆ ಎರಡು ಬಾರಿ ಮನವಿ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ. ಟೊಮ್ಯಾಟೊ ಮಾರುಕಟ್ಟೆಗೆ ಜಮೀನು ಮಂಜೂರು ಮಾಡಿಕೊಡುವುದಾಗಿ ಶಾಸಕರು ಹಾಗೂ ಅಧಿಕಾರಿಗಳು ಮಂಡಿ ಮಾಲೀಕರಿಗೆ, ರೈತರಿಗೆ ಭರವಸೆ ನೀಡಿ ಇದೀಗ ಅದೇ ಸರ್ವೆ ನಂಬರಿನಲ್ಲಿರುವ ಜಮೀನನ್ನು ಇತರ ಇಲಾಖೆಗೆ ಮಂಜೂರು ಮಾಡಲು ಮುಂದಾಗಿರುವ ಜಿಲ್ಲಾ ಮತ್ತು ತಾಲೂಕು ಆಡಳಿತದ ನಡೆಯಿಂದ ಈ ಭಾಗದ ರೈತರು, ಮಂಡಿ ವ್ಯಾಪಾರಸ್ಥರಿಗೆ ತೊಂದರೆ ಎದುರಾಗಲಿದೆ ಎಂದರು.

ಎಪಿಎಂಸಿ ಭೂಮಿಯನ್ನು ಇತರ ಇಲಾಖೆಗಳಿಗೆ ಮಂಜೂರು ಮಾಡದೆ ಟೊಮ್ಯಾಟೊ ಮಾರುಕಟ್ಟೆ ನಿರ್ಮಿಸಿಕೊಡುವಂತೆ ಒತ್ತಾಯಿಸಿ ಬಾಗೇಪಲ್ಲಿ ತಾಲೂಕು ವರ್ತಕರ ಸಂಘದ ಮುಖಂಡರು, ಸದಸ್ಯರು ತಹಸೀಲ್ದಾರ್ ಮನೀಷಾಪತ್ರಿಗೆ ಮನವಿ ಸಲ್ಲಿಸಿದರು. ಮುಖಂಡರಾದ ಎಚ್.ಎಸ್.ನರೇಂದ್ರ, ವಿ.ನಾರಾಯಣಸ್ವಾಮಿ, ಶ್ರೀನಿವಾಸ್ ಇತರರು ಇದ್ದರು.

50 ಎಕರೆಯಲ್ಲಿ ಮಾರುಕಟ್ಟೆ ನಿರ್ಮಿಸಲಿ

ಚಿಂತಾಮಣಿ ಮತ್ತು ಕೋಲಾರ ತಾಲೂಕುಗಳಲ್ಲಿ 300 ಎಕರೆ ವಿಸ್ತೀರ್ಣದಲ್ಲಿ ಟೊಮ್ಯಾಟೊ ಮಾರುಕಟ್ಟೆ ನಿರ್ಮಿಸಲು ಸರ್ಕಾರ ಮುಂದಾಗಿದೆ. ಆದರೆ, ಬಾಗೇಪಲ್ಲಿಯಲ್ಲಿ ಮಾರುಕಟ್ಟೆಗೆ ಮೀಸಲಿಟ್ಟಿರುವ ಜಮೀನನ್ನು ಇತರ ಇಲಾಖೆಗೆ ನೀಡಲು ಮುಂದಾಗಿರುವ ಅಧಿಕಾರಿಗಳ ನಡೆಗೆ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದು, ಸರ್ಕಾರ 50 ಎಕರೆ ವಿಸ್ತೀರ್ಣದಲ್ಲಿ ಟೊಮ್ಯಾಟೊ ಮಾರುಕಟ್ಟೆ ನಿರ್ಮಿಸಿಕೊಡದಿದ್ದರೆ ತಾಲೂಕು ಕಚೇರಿಯನ್ನೇ ಟೊಮ್ಯಾಟೊ ಮಾರುಕಟ್ಟೆಯನ್ನಾಗಿ ಪರಿವರ್ತನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಇದೇ ವೇಳೆ ತಹಸೀಲ್ದಾರ್ ಮನೀಷಾಪತ್ರಿ ಅವರಿಗೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿದ ತಹಸೀಲ್ದಾರ್ ಮನೀಷಾಪತ್ರಿ ಮಾತನಾಡಿ, ಬಾಗೇಪಲ್ಲಿ ಮತ್ತು ಕೊಂಡಿರೆಡ್ಡಿಪಲ್ಲಿ ಗ್ರಾಮದ ಸರ್ವೆ ನಂಬರ್‌ಗಳಲ್ಲಿರುವ 50 ಎಕರೆ ವಿಸ್ತೀರ್ಣದಲ್ಲಿ ಟೊಮ್ಯಾಟೊ ಮಾರುಕಟ್ಟೆ ನಿರ್ಮಿಸಿಕೊಡುವಂತೆ ಬೇಡಿಕೆ ಇಟ್ಟಿದ್ದಾರೆ. ಆದರೆ, ಸದರಿ ಭೂಮಿಯನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದು ಒತ್ತುವರಿ ತೆರವುಗೊಳಿಸಬೇಕಾಗಿದೆ. ನೂತನವಾಗಿ ನಿರ್ಮಿಸುತ್ತಿರುವ ನ್ಯಾಯಾಲಯ ಕಟ್ಟಡಗಳ ನಿರ್ಮಾಣಕ್ಕೆ 8 ರಿಂದ 6 ಎಕರೆ ಜಮೀನಿನ ಅವಶ್ಯಕತೆ ಇದೆ ಎಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಟೊಮ್ಯಾಟೊ ಮಾರುಕಟ್ಟೆ, ಒತ್ತುವರಿ ತೆರವು, ಕೋರ್ಟ್ ನಿರ್ಮಾಣಕ್ಕೆ ಜಮೀನು ನೀಡುವಂತೆ ಮನವಿ ಸಲ್ಲಿಸಿದ್ದು, ಎಲ್ಲ ರೀತಿಯ ಸಾಧಕ ಬಾಧಕ ಪರಿಶೀಲಿಸಿ ನ್ಯಾಯ ಒದಗಿಸುವ ಕೆಲಸ ಮಾಡುತ್ತೇವೆ ಎಂದರು.

ಸಂಘದ ನಾರಾಯಣಸ್ವಾಮಿ, ಹಮಾಲಿ ಸಂಘದ ಅಧ್ಯಕ್ಷ ತಿಪ್ಪಣ್ಣ, ಮಾರುಕಟ್ಟೆ ವ್ಯಾಪರಸ್ಥರಾದ ಟಿಎಂಎಸ್ ಶ್ರೀನಿವಾಸ್, ವಿ.ನಾರಾಯಣಸ್ವಾಮಿ, ಕೆ.ಎನ್.ಎಸ್ ಕೃಷ್ಣಪ್ಪ, ವೆಂಕಟೇಶಬಾಬು, ಶ್ರೀನಿವಾಸ, ನರೇಶ, ಎ.ಶಂಕರ, ಚಂದ್ರಪ್ಪ, ಮಂಜುನಾಥ, ಹರೀಶ್, ಆಧಿ, ಮಾಕಿರೆಡ್ಡಿ, ಎಚ್.ವಿ.ಎಸ್ ಹರೀಶ್ ಇತರರಿದ್ದರು.

ಸ್ವಾತಂತ್ರ್ಯೋತ್ಸವಕ್ಕೆ ಜಿಲ್ಲೆ ಸಜ್ಜು

ಚಿಕ್ಕಬಳ್ಳಾಪುರ: ಜಿಲ್ಲಾಡಳಿತ, ಜಿಪಂ ವತಿಯಿಂದ ನಗರದ ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಆ.15 ರಂದು ಬೆಳಗ್ಗೆ 9ಕ್ಕೆ 80ನೇ ಸ್ವಾತಂತ್ರ್ಯ ದಿನಾಚರಣೆ ಆಯೋಜಿಸಲಾಗಿದೆ. ಸಾರಿಗೆ ಸಚಿವ ಬಿ.ಎಸ್.ಸುರೇಶ ಧ್ವಜಾರೋಹಣ ನೆರವೇರಿಸಲಿದ್ದು, ಬಳಿಕ ಪಥಸಂಚಲನ ತಂಡದ ಗೌರವ ವಂದನೆ ಸ್ವೀಕರಿಸಲಿದ್ದಾರೆ. ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಾಧಕರನ್ನು ಸನ್ಮಾನಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಪ್ರದೀಪ್ ಈಶ್ವರ್ ಅಯ್ಯರ್ ವಹಿಸಲಿದ್ದಾರೆ.

ಅಂತಿಮ ಸಿದ್ಧತೆ ಪರಿಶೀಲಿಸಿದ ಡಿಸಿ: ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಭಾರತದ 80ನೇ ಸ್ವಾತಂತ್ರ್ಯ ದಿನಾಚರಣೆಯ ಅಂತಿಮ ಸಿದ್ಧತೆ ಪ್ರಕ್ರಿಯೆಗಳನ್ನು ಡಿಸಿ ಜಿ.ಪ್ರಭು ಪರಿಶೀಲಿಸಿದರು. ವೇದಿಕೆಯ ಸಿದ್ಧತೆ, ಕ್ರೀಡಾಂಗಣದ ಸ್ವಚ್ಛತೆ, ವಿದ್ಯಾರ್ಥಿಗಳ ಪಥಸಂಚಲನ ಹಾಗೂ ನೃತ್ಯ ಅಭ್ಯಾಸವನ್ನು ವೀಕ್ಷಿಸಿದರು.

ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವ, ಗಾಂಧಿ ಜಯಂತಿ ಸೇರಿದಂತೆ ಎಲ್ಲ ರಾಷ್ಟ್ರೀಯ, ನಾಡಹಬ್ಬಗಳನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಇನ್ನು ಪ್ರತಿಯೊಂದು ಕಾರ್ಯಕ್ರಮದಲ್ಲೂ ಸಹ ಒಂದೊಂದು ಸಕಾರಾತ್ಮಕ ಸಂಕಲ್ಪ ಮಾಡಬೇಕು. ಅದರಲ್ಲೂ ಉತ್ತಮ ವಿದ್ಯಾಭ್ಯಾಸ, ಪರಿಸರ ಬಗೆಗಿನ ಕಾಳಜಿ, ಪ್ರಾಮಾಣಿಕತೆ, ಸತ್ಯ, ಅಹಿಂಸೆ ಮತ್ತು ಭಾತೃತ್ವದ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಚಿಕ್ಕಬಳ್ಳಾಪುರದ ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಿದ್ಧತೆ ಪ್ರಕ್ರಿಯೆಗಳನ್ನು ಡಿಸಿ ಜಿ.ಪ್ರಭು ಪರಿಶೀಲಿಸಿದರು. ಜಿಪಂ ಸಿಇಒ ಡಾ.ವೈ.ನವೀನ್ ಭಟ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ, ಅಪರ ಜಿಲ್ಲಾಧಿಕಾರಿ ಡಾ.ಎನ್.ಭಾಸ್ಕರ್, ಉಪವಿಭಾಗಾಧಿಕಾರಿ ಡಿ.ಎಚ್. ಅಶ್ವಿನ್ ಇದ್ದರು.

ದತ್ತು ಪಡೆದ ಶಾಲೆಗಳ ಅಭಿವೃದ್ಧಿಗೆ ಒತ್ತು

ಗೌರಿಬಿದನೂರಿನ ಹುದಗೂರು ಶಾಲೆ ವಿದ್ಯಾರ್ಥಿಗಳಿಗೆ ಟ್ರ್ಯಾಕ್ ಸೂಟ್ ವಿತರಿಸಲಾಯಿತು. ಡಾ.ಆರ್.ಕೆ.ಮಂಜುನಾಥ್, ಉಪಾಧ್ಯಕ್ಷ ಪ್ರೊ.ಎನ್.ರಮೇಶ್, ಸದಸ್ಯ ಸೀತಾರಾಮ್ ಇದ್ದರು.

ಗೌರಿಬಿದನೂರು: ಗ್ರಾಮೀಣ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಕ್ರೀಡಾಕೂಟದಲ್ಲಿ ಭಾಗವಹಿಸಲು ಟ್ರ್ಯಾಕ್ ಸೂಟ್ ಸಹಕಾರಿಯಾಗುತ್ತವೆ ಎಂದು ಡಾ.ಎಚ್.ಎನ್.ಗ್ಲೋಬಲ್ ಫೋರಂ ಅಧ್ಯಕ್ಷ ಡಾ.ಆರ್.ಕೆ.ಮಂಜುನಾಥ್ ಹೇಳಿದರು.

ಗೌರಿಬಿದನೂರಿನ ಗೆದರೆ, ಬೈಚಾಪುರ, ಹುದುಗೂರು ಮತ್ತು ನಗರಗೆರೆಯ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಉಚಿತ ಟ್ರ್ಯಾಕ್ ಸೂಟ್ ವಿತರಿಸಿ ಮಾತನಾಡಿದರು. ಡಾ.ಎಚ್.ಎನ್.ಗ್ಲೋಬಲ್ ಫೋರಂ ಪ್ರಸಕ್ತ ಸಾಲಿನಿಂದ ದತ್ತು ಪಡೆದ ಶಾಲೆಗಳ ಸರ್ವಾಂಗೀಣ ಅಭಿವೃದ್ಧಿಗೆ ಕೈಗೊಂಡಿರುವ ಹಲವು ಯೋಜನೆಗಳ ಮುಂದುವರಿದ ಭಾಗವಾಗಿ ನಾಲ್ಕು ಪ್ರೌಢಶಾಲೆಗಳಿಗೆ ಗುಣಮಟ್ಟದ ಕ್ರೀಡಾ ಸಮವಸ್ತ್ರ ವಿತರಿಸಿ, ವಾರದಲ್ಲಿ ಒಂದು ದಿನ ಅಥವಾ ವಿಶೇಷ ದಿನದಂದು ಸಮವಸ್ತ್ರವಾಗಿಯೂ ಬಳಸಬಹುದು ಎಂದರು. ಕೋಟೆ ಬಾಲಕಿಯರ ಪ್ರೌಢಶಾಲೆಯ ನೀಲಿ ಬಣ್ಣದ ಟೀ-ಶರ್ಟ್ ಶಾಲಾ ಸಂಸತ್ ಮಂಡಳಿಯ ಎಲ್ಲ ಸದಸ್ಯರಿಗೆ ಹಾಗೂ ಶಾಲೆಯ ಬ್ಯಾಂಡ್ ಸೆಟ್ ತಂಡದ ಎಲ್ಲ ವಿದ್ಯಾರ್ಥಿನಿಯರಿಗೆ ಪೂರ್ಣ ಪ್ರಮಾಣದ ಬ್ಯಾಂಡ್ ಸೆಟ್ ಸಮವಸ್ತ್ರವನ್ನು ಫೋರಂನ ಉಪಾಧ್ಯಕ್ಷ ಪ್ರೊ.ಎನ್.ರಮೇಶ್ ವಿತರಿಸಿದರು.

ಫೋರಂನ ಸದಸ್ಯ ಸೀತಾರಾಮ್ ಮಾತನಾಡಿ, ಮಕ್ಕಳು ಸೌಲಭ್ಯವನ್ನು ಸದ್ಬಳಕೆ ಮಾಡಿಕೊಂಡು ಉತ್ತಮ ಫಲಿತಾಂಶ ಪಡೆಯುವ ಪ್ರಮಾಣವಚನವನ್ನು ಬೋಧಿಸಿದರು. ಪ್ರೌಢಶಾಲೆಗಳ ಮುಖ್ಯಶಿಕ್ಷಕರಾದ ಧನಂಜಯ, ರಂಗಮ್ಮ ಮತ್ತು ಸಹಶಿಕ್ಷಕರಾದ ನರಸಿಂಹಮೂರ್ತಿ, ಶಮೀರ್ ಪಾಷಾ ,ಅಂಜಯ್ಯ ಶ್ರೀನಿವಾಸ, ರವಿ, ಅಕ್ಷತಾ, ಸುಮನ್ ಇದ್ದರು.

ಅರ್ಜಿಗಳನ್ನು ಅವಧಿಯೊಳಗೆ ವಿಲೇವಾರಿ ಮಾಡಿ

ಬಾಗೇಪಲ್ಲಿ: ಕುಡಿಯುವ ನೀರು, ಮೂಲ ಸೌಕರ್ಯ ಹಾಗೂ ಸರ್ಕಾರಿ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವ ಅರ್ಜಿದಾರರ ಕೆಲಸಗಳನ್ನು ಅವಧಿಯೊಳಗೆ ಪೂರ್ಣಗೊಳಿಸಿ ಎಂದು ಜಿಲ್ಲಾಧಿಕಾರಿ ಜಿ.ಪ್ರಭು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪರಗೋಡು ಹಾಲು ಶಿಥಲೀಕರಣ ಕೇಂದ್ರ, ಸರ್ಕಾರಿ ಶಾಲೆ, ಪುರಸಭೆ ಕಾರ್ಯಾಲಯ, ತಾಲೂಕು ಕಚೇರಿಯ ವಿವಿಧ ವಿಭಾಗಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದ ಅವರು, ಸಕಾಲ ಅರ್ಜಿ ಸ್ವೀಕೃತ ಕೇಂದ್ರಗಳಲ್ಲಿ ಸಲ್ಲಿಸಿರುವ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿರುವ ಮಾಹಿತಿ ಪಡೆಯುವ ಜತೆಗೆ ಅರ್ಜಿದಾರರಿಗೆ ಖುದ್ದು ಕರೆ ಮಾಡಿ ಸ್ಪಷ್ಟನೆ ಪಡೆದು, ದಾಖಲೆಗಳನ್ನು ಪರಿಶೀಲಿಸಿದರು.

■ **ಬಾಗೇಪಲ್ಲಿಯ ವಿವಿಧ ಕಚೇರಿಗಳಲ್ಲಿ ಕಡತ ಪರಿಶೀಲಿಸಿದ ಡಿಸಿ**

ಪುರಸಭೆ ಕಚೇರಿಗೆ ಭೇಟಿ ನೀಡಿ ಮನೆ ಮತ್ತು ನಿವೇಶನಗಳ ಇ-ಖಾತೆ, ಕುಡಿಯುವ ನೀರು ಸರಬರಾಜು,ವಿದ್ಯುತ್ ದೀಪಗಳ ನಿರ್ವಹಣೆ, ಸ್ವಚ್ಛತೆ ಕುರಿತು ಸಲ್ಲಿಸಿರುವ ದೂರುಗಳ ಮಾಹಿತಿ ಪಡೆದ ಜಿಲ್ಲಾಧಿಕಾರಿಯವರು, ಎಷ್ಟು ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದೆ, ಎಷ್ಟು ಬಾಕಿ ಉಳಿದಿವೆ ಎಂದು ಪರಿಶೀಲಿಸಿ ಸಕಾಲಕ್ಕೆ ದೂರು ಅರ್ಜಿಗಳನ್ನು ವಿಲೇವಾರಿ ಮಾಡುವಂತೆ ಮುಖ್ಯಾಧಿಕಾರಿ ಎಂ.ಶ್ರೀನಿವಾಸ್‌ಗೆ ಸೂಚಿಸಿದರು. ತಹಸೀಲ್ದಾರ್ ಕಚೇರಿಯಲ್ಲಿ ಕಂದಾಯ ಇಲಾಖೆ ಅಧಿಕಾರಿಗಳ ಸಭೆ ಆಯೋಜಿಸಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಸ್ಥಳದಲ್ಲೇ ದೂರು ಅರ್ಜಿಗಳಿಗೆ ಪರಿಹಾರ ಕಲ್ಪಿಸಿದರು. ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಕಡತಗಳನ್ನು ವರ್ಗಾವಣೆ ಮಾಡಿ ನಿಗದಿತ ಅವಧಿಯೊಳಗೆ ಜಿಲ್ಲಾಧಿಕಾರಿಗಳ ಕಚೇರಿಗೆ ವರದಿ ಸಲ್ಲಿಸುವಂತೆ ತಹಸೀಲ್ದಾರ್ ಮನೀಷಾಪತ್ರಿಗೆ ಸೂಚಿಸಿದರು.

ಚಿತ್ರಾವತಿ ನದಿಗೆ ಹರಿಯುತ್ತಿರುವ ಚರಂಡಿ ನೀರು ನಿಯಂತ್ರಣಕ್ಕೆ ಏಕಕಾಲದಲ್ಲಿ ಪರಿಹಾರ ಕಲ್ಪಿಸಲು ಸಾಧ್ಯವಿಲ್ಲ. ಹೋರಾಟಗಾರರ ಆತುರದ ನಿರ್ಣಯಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಕೊಳಚೆ ನೀರು ನಿಯಂತ್ರಣಕ್ಕೆ ಬೃಹತ್ ಯೋಜನೆ ಸಿದ್ಧಪಡಿಸಿ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಶ್ರಮಿಸುತ್ತಿದೆ. ಹೋರಾಟಗಾರರು ಸಮನ್ವಯ ಪಾಲಿಸಿ ಎಂದು ಡಿಸಿ ಮನವಿ ನೀಡಿದರು.

ಬಾಗೇಪಲ್ಲಿಯ ತಹಸೀಲ್ದಾರ್ ಕಚೇರಿಗೆ ಜಿಲ್ಲಾಧಿಕಾರಿ ಜಿ.ಪ್ರಭು ಭೇಟಿ ನೀಡಿ ಪರಿಶೀಲಿಸಿದರು. ಚಿಮುಲ್ ಅಧ್ಯಕ್ಷ ವಿ.ಮಂಜುನಾಥರೆಡ್ಡಿ, ಡಿಡಿಎಲ್‌ಆರ್ ಮಂಜುನಾಥ, ತಹಸೀಲ್ದಾರ್ ಮನೀಷಾಪತ್ರಿ, ಗ್ರೇಡ್-2 ತಹಸೀಲ್ದಾರ್ ಮೋಹನ್‌ಬಾಬು, ಶಿರಸ್ತೇದಾರ್ ಮಂಜುನಾಥ್, ಪುರಸಭೆ ಮುಖ್ಯಾಧಿಕಾರಿ ಎಂ.ಶ್ರೀನಿವಾಸ್ ಇದ್ದರು.

ಸಾಮಾಜಿಕ ಹೋರಾಟಗಾರರ ಅಸಮಾಧಾನ

ಜಿಲ್ಲಾಧಿಕಾರಿಗಳು ವಿವಿಧ ಸರ್ಕಾರಿ ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ ಮಾಧ್ಯಮಗಳಿಗೆ ಪೋಜು ಕೊಟ್ಟಿರುವುದು ಬಿಟ್ಟರೆ ಭ್ರಷ್ಟಾಚಾರವನ್ನು ಸುಧಾರಣೆಗೆ ತರುವಲ್ಲಿ ವಿಫಲರಾಗಿದ್ದಾರೆ. ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಿ ದಾಖಲೆ ಪರಿಶೀಲಿಸಿದಂತೆ, ತಾಲೂಕು ವ್ಯಾಪ್ತಿಯಲ್ಲಿ ಭೂಗಳ್ಳರು ಕಬಳಿಕೆ ಮಾಡಿಕೊಂಡಿರುವ ಸರ್ಕಾರಿ ಜಮೀನುಗಳಿಗೆ ಭೇಟಿ ನೀಡಿ ಪರಿಶೀಲನೆ ಏಕೆ ನಡೆಸುತ್ತಿಲ್ಲ. ತಾಲೂಕು ವ್ಯಾಪ್ತಿಯಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಭೂ ಹಗರಣದ ಬಗ್ಗೆ ತುಟಿ ಬಿಚ್ಚುತ್ತಿಲ್ಲ ಎಂದು ಸಾಮಾಜಿಕ ಹೋರಾಟಗಾರರು ಸಾಮಾಜಿಕ ಜಾಲತಾಣದಲ್ಲಿ ಜಿಲ್ಲಾಧಿಕಾರಿಯವರನ್ನು ಪ್ರಶ್ನಿಸಿದ್ದಾರೆ.

ಬಾಗೇಪಲ್ಲಿ ತಾಲೂಕಿನ ಪಾತಪಾಳ್ಯ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಗೆ ಬೆಂಗಳೂರಿನ ಲೈಟ್ ಎ ಡ್ರೀಮ್ ಮುಖ್ಯ ವ್ಯವಸ್ಥಾಪಕ ಪಿ.ಹರ್ಷ ವಾಟರ್ ಫಿಲ್ಟರ್ ಕೊಡುಗೆಯಾಗಿ ನೀಡಿದರು. ಮುಖ್ಯಶಿಕ್ಷಕಿ ಶಹನಾಜ್, ಬಿಆರ್‌ಪಿ ನಸರುದ್ದೀನ್, ಶಿಕ್ಷಕ ಫಯಾಜ್ ಅಹಮದ್, ಅತಿಥಿ ಶಿಕ್ಷಕಿ ಸಹೇರಾಭಾನು, ನಸಿಯಾಬಾನು, ರಿಜ್ವಾನಬೇಗಂ ಇದ್ದರು.

1. ಚಿಂತಾಮಣಿಯ ಅಗ್ರಹಾರ ಬಡಾವಣೆಯ ಶ್ರೀ ಪಟಾಲಮ್ಮ ದೇವಿಗೆ ಶ್ರಾವಣ ಮಾಸದ ಮೊದಲ ಶುಕ್ರವಾರ ವಿಶೇಷ ಅಲಂಕಾರ. 2. ಕಸಬಾ ಹೋಬಳಿಯ ಅನೂರು ದೊಡ್ಡಕೆರೆ ಅಚ್ಚುಕಟ್ಟು ಪ್ರದೇಶದ ಶ್ರೀ ಚೌಡೇಶ್ವರಿ ದೇವಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.